ಭಾಗದ ಒಬ್ಬ ಶಾಸಕನಾಗಿ ಆ ಅಧಿಕಾರಿಗಳಿಗೆ ಈ ಕೆಲಸ ತೆಗೆದುಕೊಳ್ಳಿ ಎಂದು ಹೇಳಿ ಕೊಟ್ಟರೂ ಸಹ ಇನ್ನೂ ಕೂಡ ಅವರು ಕಾರ್ಯ ಪ್ರವೃತ್ತರಾಗಿಲ್ಲ. ಈ ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ತಾವು ತುರ್ತಾಗಿ ಈ ಕೆಲಸ ಪ್ರಾರಂಭ ಮಾಡಲಿಕ್ಕೆ ಆದೇಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್ ಚಿಕ್ಕೇಗೌಡ:- ಖಂಡಿತವಾಗಿ ಕೊಡುತ್ತೇನೆ.

ಲಾಲ್‌ಬಾಗ್ ಹತ್ತಿರ ವಿದ್ಯುತ್ ಚಿತಾಗಾರದಿಂದ ಮಾಲಿನ್ಯ

೨೫೮(೧೬೪೯)ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕ ಪೇಟೆ):- ಮಾನ್ಯ ವಿಜ್ಞಾನ ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಬೆಂಗಳೂರು ನಗರದಲ್ಲಿ ಲಾಲಬಾಗ್ ಗೇಟಿನ ಬಳಿ ಒಂದು ವಿದ್ಯುತ್ ಚಿತಾಗಾರ ಇದೆ ಎನ್ನುವುದು ನಿಜವೇ;

ಆ) ಈ ವಿದ್ಯುತ್ ಚಿತಾಗಾರದಲ್ಲಿ ಶವಗಳನ್ನು ಸುಡುವುದರಿಂದ ಉಂಟಾಗುವ ಕೆಟ್ಟ ವಾಸನೆಯುಳ್ಳ ಹೊಗೆಯಿಂದಾಗಿ ಅಲ್ಲಿನ ವಾತಾವರಣದಲ್ಲಿನ ಗಾಳಿಯು ಮಲಿನವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರವು ಈ ವಿದ್ಯುತ್ ಚಿತಾಗಾರವನ್ನು ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು):-

ಅ) ಹೌದು

ಆ) ಬಂದಿದೆ

ಇ) ಸ್ಥಳೀಯ ಜನರಿಂದ ದೂರುಗಳು ಬಂದಿದ್ದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಚಿತಾಗಾರಕ್ಕೆ ಸೂಕ್ತವಾದ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ಕಮೀಷನರ್, ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಪತ್ರ ದಿನಾಂಕ ೧೦-೯-೯೦ ರಲ್ಲಿ ತಿಳಿಸಿರುತ್ತಾರೆ. ಇದರ ಬಗ್ಗೆ ಮಂಡಳಿ ಅರೆ ಸರ್ಕಾರಿ ಪತ್ರದ ಮೂಲಕ ದಿನಾಂಕ ೨೩-೩-೯೧ ರಂದು ಜ್ಞಾಪಿಸಲಾಗಿದೆ. ಈ ಬಗ್ಗೆ ಕಮೀಷನ್‌ರವರಿಂದ ಉತ್ತರ ಬಾರದೆ ಇದ್ದುದರಿಂದ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು ಮಾಲಿನ್ಯ ನಿಯಂತ್ರಣ ಖಾಯಿದೆ ೧೯೮೧ರ ಸೆಕ್ಷನ್ ೨೧ರ ಪ್ರಕಾರ ಹಾಗೂ ಜಲ ಮಾಲಿನ್ಯ ನಿಯಂತ್ರಣ ಖಾಯಿದೆ ೧೯೭೪ರ ಸೆಕ್ಷನ್ ೨೫:೨೬ರ ಅಡಿಯಲ್ಲಿ ಕಾನೂನು ಪ್ರಕಾರ ಏಕೆ ಕ್ರಮ ತೆಗೆದುಕೊಳ್ಳಬಾರದು ಎಂದು ಕಾರಣ ಕೇಳುವ ಸೂಚನಾ ಪತ್ರವನ್ನು ದಿನಾಂಕ ೨೭.೧.೯೨ರಂದು ಜಾರಿಗೊಳಿಸಲಾಗಿದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಏನೆಂದರೆ, ಬೆಂಗಳೂರು ಮಹಾನಗರದಲ್ಲಿ ಲಾಲ್‌ಬಾಗ್ ಗೇಟ್ ಹತ್ತಿರ ಒಂದು ಎಲೆಕ್ಟ್ರಿಕ್ ಕ್ರಿಮಿಟೋರಿಯಂ ಇದೆ. ಅದರ

ಸುತ್ತಮುತ್ತ ಬಡಾವಣೆಗಳಿವೆ. ವಿಲ್ಸನ್‌ಗಾರ್ಡನ್ ದೊಡ್ಡ ಬಡಾವಣೆ ಇದೆ. ಜಯನಗರ ದೊಡ್ಡ ಬಡಾವಣೆ ಇದೆ. ಸಿದ್ದಾಪುರ ದೊಡ್ಡ ಬಡಾವಣೆ ಇದೆ. ಈ ವಿದ್ಯುತ್ ಚಿತಾಗಾರದಲ್ಲಿ ಶವಗಳನ್ನು ಸುಡುವ ವಾಸನೆ ಲಾಲ್‌ಬಾಗ್ ಮೈನ್ ಗೇಟ್‌ವರೆಗೂ ಬರುತ್ತದೆ. ಅಲ್ಲಿ ತಮಿಳುನಾಡಿಗೆ ಹೋಗುವ ನ್ಯಾಷನಲ್ ಹೆದ್ದಾರಿ ಇದೆ. ಅಲ್ಲಿ ಯಾರು ಓಡಾಡಿದರೂ, ಫಾರಿನ್ ಟೂರಿಸ್ಟ್‌ಗಳು ಬಂದರೂ, ಡೊಮೆಸ್ಟಿಕ್ ಟೂರಿಸ್ಟ್‌ಗಳು ಬಂದರೂ ನಮ್ಮ ರಾಜ್ಯದ ಪ್ರವಾಸಿಗರು ಬಂದರೂ ಲಾಲ್‌ಬಾಗ್‌ಗೆ ಹೋಗಬೇಕಾದರೆ ಅಲ್ಲಿ ಹೆಣ ಸುಡುವ ವಾಸನೆ ತೆಗೆದುಕೊಂಡೇ ಲಾಲ್‌ಬಾಗ್ ಒಳಗೆ ಹೋಗಬೇಕಾಗಿದೆ. ಈ ಪರಿಸ್ಥಿತಿ ಇರುವಾಗ ನನ್ನ ಎರಡನೇ ಪ್ರಶ್ನೆಗೆ ಇದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಬಂದಿದ್ದರೆ ಏನು ಮಾಡಿದ್ದೀರಿ ಎಂದು ಪ್ರಶ್ನೆ ಕೇಳಿದರೆ ೯-ನೇ ಇಸವಿ ಸೆಪ್ಟೆಂಬರ್ ತಿಂಗಳಲ್ಲಿ ನೋಟಿಸ್ ಕೊಟ್ಟಿದ್ದೇವೆ, ನಂತರ ೧೯೯೧ನೇ ಮಾರ್ಚಿಯಲ್ಲಿ ಒಂದು ರಿಮೈಂಡರ್ ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ. ಮತ್ತೆ ಈಗ ನನ್ನ ಪ್ರಶ್ನೆ ಹೋದ ಮೇಲೆ ಜನವರಿ ೧೯೯೨ರಲ್ಲಿ ಕಾರ್ಪೋರೇಷನ್ ಕಮಿಷನರ್‌ಗೆ ಇನ್ನೊಂದು ಷೋಕಾಸ್ ನೋಟೀಸ್ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಎರಡು ವರ್ಷಗಳಿಂದ ಬರೀ ನೋಟೀಸ್‌ಗಳನ್ನು ಕೊಟ್ಟುಕೊಂಡೇ ಇದ್ದರೆ ವಾಯುಮಾಲಿನ್ಯ ಏನಾಗಿದೆ, ಬೆಂಗಳೂರು ಸಿಟಿ ಮಧ್ಯದಲ್ಲಿ ಜನಗಳು ಹೆಣ ಸುಡುವ ವಾಸನೆಯನ್ನು ಕುಡಿದುಕೊಂಡು ಓಡಾಡುತ್ತಿದ್ದಾರೆ. ನಿಮ್ಮ ಡಿಪಾರ್ಟ್‌ಮೆಂಟ್ ಸಿಬ್ಬಂದಿ ಏನು ಮಾಡುತ್ತಿದ್ದಾರೆ, ಇದಕ್ಕೆ ಏನಾದರೂ ಒಂದು ಸಲ್ಯೂಷನ್ ಹುಡುಕಿಕೊಡುತ್ತಾರೆಯೇ ಎಂದು ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಸದಸ್ಯರು ಒಳ್ಳೆಯ ಸ್ವಾರಸ್ಯಕರವಾದ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಆ ಸ್ಥಳದಲ್ಲಿ ಹೋಗಿ ಬರುವಾಗ ಮೂಗು ಹಿಡಿದುಕೊಂಡು ಹೋಗಿದ್ದೇನೆ, ಮೂಗು ಮುಚ್ಚಿಕೊಂಡು ಹೋಗಿದ್ದೇನೆ. ನೀವು ಹೇಳಿದ್ದೆಲ್ಲ ಸರಿ. ನಾನು ಮುನಿಸಿಪಲ್ ಕಮೀಷನರ್‌ರವರನ್ನು ಕರೆದು ನಿರ್ದೇಶನ ಕೊಟ್ಟಿದ್ದೇನೆ. ಆದನ್ನು ನಿಲ್ಲಿಸಿದ್ದಾರೆ. ಈಗ ಎತ್ತರ ಮಾಡಿದ್ದಾರೆ. ಈಗ ಸರಿಯಾಗಿದೆ. ಆದನ್ನು ಇನ್ನೂ ಜಾರಿಗೆ ಕೊಟ್ಟಿಲ್ಲವೆಂದು ಕಾಣುತ್ತದೆ. ಬಹುಶಃ ಇದೇ ರೀತಿ ಬೆಂಗಳೂರು ಸಿಟಿಯಲ್ಲಿ ಎಲ್ಲೆಲ್ಲಿ ಇಂತಹ ಕಾರ್ಯಾಗಾರಗಳು ಇವೆ ಅವೆಲ್ಲವುಗಳನ್ನು ಎತ್ತರ ಮಾಡಬೇಕು. ಅಲ್ಲಿ ಏನು ದುರ್ವಾಸನೆ ಬರುತ್ತದೆ ಅದನ್ನು ನಿಲ್ಲಿಸಬೇಕು ಎಂದು ಹೇಳಿದ್ದೇನೆ. ಅವರು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದು ಒಂದು ಒಳ್ಳೆಯ ಸೂಚನೆ. ನಾನು ಕ್ರಮ ತೆಗೆದುಕೊಂಡ ಮೇಲೆ ತಾವು ಈ ಪ್ರಶ್ನೆ ಕೇಳುತ್ತಿರಲಿಲ್ಲವೆಂದು ಕಾಣಿಸುತ್ತದೆ. ನಾನು ಕ್ರಮ ತೆಗೆದುಕೊಂಡಿದ್ದೇನೆ. ಅವರಿಗೆ ಸೂಚನೆ ಕೊಟ್ಟಿದ್ದೇನೆ, ಕೆಲಸ ಮಾಡುತ್ತಿದ್ದಾರೆ. ಉಳಿದ ಕಾರ್ಯಾಗಾರಗಳನ್ನು ರಿಪೇರಿ ಮಾಡಬೇಕೆಂದು ಹೇಳಿದ್ದೇನೆ, ಮಾಡುತ್ತಿದ್ದಾರೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಅದು ರಿಪೇರಿಯಲ್ಲಿದೆ.

ಶ್ರೀ ಬಿ. ಬಸವಲಿಂಗಪ್ಪ:- ಲಾಲ್‌ಬಾಗ್‌ದು ಮುಗಿಸಿದ್ದಾರೆ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಅಧ್ಯಕ್ಷರೇ ಇದು ನನ್ನ ಕ್ಷೇತ್ರಕ್ಕೆ ಬರುತ್ತದೆ. ಅಲ್ಲಿ ಮೇಜರ್ ರಿಪೇರಿ ಆಗುತ್ತಿದೆ. ಆದರ ಚಿಮಣಿ ಇನ್ನೂ ಬಹಳ ಎತ್ತರಕ್ಕೆ ಹೋಗಬೇಕು. ಇಲ್ಲದೇ ಹೋದರೆ ಸುತ್ತಮುತ್ತ ವಾಸನೆ ಬರುತ್ತದೆ. ಈಗಿರುವ ಹೈಟ್ ಸಾಲದು, ಬಹಳ ಕಡಿಮೆ ಆಯಿತು, ಜಾಸ್ತಿ ಹೈಟ್ ಮಾಡಬೇಕು. ತಾವು ಇದರ ಬಗ್ಗೆ ಆದೇಶ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:- ನಾನು ಒಪ್ಪುತ್ತೇನೆ. ಈಗ ಎತ್ತರ ಮಾಡಿದ್ದಾರೆ. ಅಲ್ಲಿ ಇನ್ನೂ ಕೆಲಸ ಮಾಡುತ್ತಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅದನ್ನು ಇನ್ನೂ ಎತ್ತರ ಮಾಡುವುದಾದರೆ ಮತ್ತೆ ಪರೀಕ್ಷೆ ಮಾಡಿ ಸೂಚನೆ ಕೊಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ತುಮಕೂರು ಜಿಲ್ಲಾ ಪರಿಷತ್ತಿನಿಂದ ತೆರೆದ ಪಶು ವೈದ್ಯಶಾಲೆಗಳು

೩೫೬(೧೮೩೨) ಶ್ರೀ ಮಾಧು ಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ತುಮಕೂರು ಜಿಲ್ಲಾಪರಿಷತ್ ವತಿಯಿಂದ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಎರಡು ವರ್ಷಗಳ ಹಿಂದೆ ಆರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅವುಗಳನ್ನು ಮುಂದುವರಿಸಿ, ಸಿಬ್ಬಂದಿ ನೇಮಕ ಮಾಡುವ ಆಲೋಚನೆ ಏನಾದರೂ ಇದೆಯೆ;

ಇ) ಇದ್ದಲ್ಲಿ ಎಂದಿನಿಂದ ಈ ಕೆಲಸ ಆರಂಭ ಮಾಡಬಹುದು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು):-

ಅ) ಹೌದು, ಆದರೆ ಇವುಗಳಿಗೆ ಸರ್ಕಾರದ ಮಂಜೂರಾತಿ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಮಲಪ್ರಭಾ ಯೋಜನೆಯ ಪುನರ್‌ವಸತಿ ಕೇಂದ್ರಗಳಿಗೆ ಡ್ರಯನೇಜ್ ವ್ಯವಸ್ಥೆ

೩೫೭(೨೧೪೫೫)ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಬೆಳಗಾವಿ ಜಿಲ್ಲೆ ಮಲಪ್ರಭಾ ಯೋಜನೆಯಲ್ಲಿ ಮುಡುಗಡೆಯಾದ ಏರಿ ಪುನರ್‌ವಸತಿಗೆ ಹೊಸದಾಗಿ ನಿರ್ಮಿಸಲಾದ ಪುನರ್ ವಸತಿ ಕೇಂದ್ರಗಳಾದ ಬೈಲಹೊಂಗಲ ತಾಲ್ಲೂಕು ದರ್ಬೂರ, ಗುಡದೂರ, ಆರವಳ್ಳಿ, ಚಿಕ್ಕಮುಳಕೂರು ಗ್ರಾಮಗಳಲ್ಲಿ ನೀರಾವರಿ ಇಲಾಖೆ ಇವರು ಅಂಡರ್ ಗ್ರೌಂಡ್ ಡ್ರಾಯನೇಜ್ ಯೋಜನೆಯನ್ನು ಮಾಡದೇ ಇರವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಯೋಜನೆಯನ್ನು ಮಾಡದೇ ಇರುವುದರಿಂದ ಜನರು ರಸ್ತೆಯ ಬದಿಗೆ ಮಲಮೂತ್ರ ವಿಸರ್ಜನೆ ಮಾಡುತ್ತಿದ್ದು ಅಲ್ಲಿಯ ಪರಿಸರ ಕೆಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪರಿಸರ ಮತ್ತು ಮಾಲಿನ್ಯ ಕಾಯಿದೆ ಪ್ರಕಾರ ಅಂಡರ್ ಗ್ರೌಂಡ್ ಡ್ರೈನೇಜ್‌ನ್ನು